# Sahitya School

Shidlaghatta Road, Near Shirusti Hospital, H Cross.

## ನಿಮ್ಮ ಮಕ್ಕಳು ಏನನ್ನು ನೋಡುತ್ತಿದ್ದಾರೆ ಎಂಬುದನ್ನು ಗಮನಿಸಿಕೊಳ್ಳಿ.



- **ನೀವು ಸದಾ ಗಮನಿಸುತ್ತಿರಿ.** ನಿಮ್ಮ ಮಗು ಸುಲಭವಾಗಿ ಬಳಸುವಂತಹ ಮತ್ತು ಕ್ಷೇಮಕರವಾದ ಸರ್ಚ್–ಇಂಜಿನ್ ಗಳನ್ನು ಹುಡುಕಿ. ಅವುಗಳನ್ನು ಗುರುತು ಮಾಡಿಕೊಳ್ಳಿ.

- **ನಿಮ್ಮ ಮಗುವಿನೊಂದಿಗೆ ಒಪ್ಪಂದ ಮಾಡಿಕೊಳ್ಳಿ.** ಸುರಕ್ಷಿತ ಮತ್ತು ಕ್ಷೇಮಕರವಾದ ವೆಬ್ ಸೈಟ್ ಗಳನ್ನು ಮಾತ್ರ ಹುಡುಕುವುದಾಗಿ ನಿಮ್ಮ ಮಗುವಿನೊಂದಿಗೆ ಒಂದು ಒಪ್ಪಂದ ಮಾಡಿಕೊಳ್ಳಿ. ಅಕಸ್ಮಾತ್ ಅಸುರಕ್ಷಿತ ಅಂತರ್ಜಾಲ ತಾಣಕ್ಕೆ ಪ್ರವೇಶವಾದರೆ ನಿಮ್ಮ ಗಮನಕ್ಕೆ ತರಲು ಹೇಳಿ. ನೀವು ಅದನ್ನು ಹಿಸ್ಟರಿ ಫೋಲ್ಡರಿನಿಂದ ಅಳಿಸಬಹುದು.

- **ಸದಾ ಜಾಗೃತರಾಗಿರಿ.** ನಿಮ್ಮ ಮಕ್ಕಳ ಅಂತರ್ಜಾಲ ಹುಡುಕಾಟಗಳ ಬಗ್ಗೆ ಸದಾ ಗಮನ ಕೊಡಿ. ಅವರು ಏನು ಹುಡುಕುತ್ತಿದ್ದಾರೆ ಎಂಬುದನ್ನು ನಿಮ್ಮ ಜೊತೆ ಚರ್ಚಿಸುತ್ತಿರಲಿ.

- **ಅಂತರ್ಜಾಲ ಬಳಕೆ ಒಳ್ಳೆಯದೆ.** ಆದರೆ ಕಂಪ್ಯೂಟರ್ ಎಲ್ಲರಿಗೂ ಕಾಣುವಂತೆ ಹಾಲ್‌ನಲ್ಲಿರಬೇಕು. ಅದರ ಪರದೆ ಎಲ್ಲರಿಗೂ ಕಾಣುವಂತಿರಬೇಕು.

- **ಅಂತರ್ಜಾಲ ಅಸಭ್ಯಗಳನ್ನು ಗಮನಿಸುತ್ತಿರಿ.** ಮಕ್ಕಳು ತಾವು ಗಮನಿಸುವ ಅಂತರ್ಜಾಲ ಅಸಭ್ಯಗಳನ್ನು ಅಥವಾ ಬೆದರಿಕೆಗಳನ್ನು ನಿಮ್ಮ ಗಮನಕ್ಕೆ ತರುವಷ್ಟು ಮುಕ್ತವಾಗಿರುವಂತೆ ಅವರನ್ನು ಪ್ರೇರೇಪಿಸಿ. ಅವೆಲ್ಲವೂ ಅವರ ತಪ್ಪಾಗಿರುವುದಿಲ್ಲ. ಅಂತಹ ವೆಬ್ ವಿಳಾಸಗಳನ್ನು ನೀವು ನಿಮ್ಮ ಸುಪರ್ಧಿಯಲ್ಲಿರುವ ಫಿಲ್ಟರ್ ಲಿಸ್ಟಿಗೆ ಸೇರಿಸಬಹುದು.

- **ಸುರಕ್ಷಿತ ಡೌನ್‌ಲೋಡ್‌ಗಳು.** ನೀವು ಒಪ್ಪದೆ ನಿಮ್ಮ ಮಗು ಅಂತರ್ಜಾಲದಿಂದ ಅಪರಿಚಿತ ಫೈಲ್‌ಗಳನ್ನು ಡೌನ್‌ಲೋಡ್ ಮಾಡಬಾರದು. ಅಜ್ಞಾತ ಫೈಲ್‌ಗಳನ್ನು ಎಂದಿಗೂ ಡೌನ್‌ಲೋಡ್ ಮಾಡದಿರುವುದು ಉತ್ತಮ.

**Where Fun Meets Learning**